# ಭಾಯಿ ಭಾಯಿ

**ಗೋಪೀನಾಥ ರಾವ್**

ಕಲೆ: ಪ್ರವೀಣ್ ಆಚಾರ್ಯ

ಅಷ್ಟು ಬೆಳಗ್ಗೆ ದುಬೈಯ ಕೆಲವು ರಸ್ತೆಗಳಿಂದ ಟ್ಯಾಕ್ಸಿ ಸಿಗುವುದು ಸ್ವಲ್ಪ ಕಷ್ಟವೇ. ಆದರೂ ಮಾವನ ರೂಮಿನಿಂದ ಹತ್ತು ಹೆಜ್ಜೆ ಹಾಕಿ ರಸ್ತೆಯ ತಿರುವಿನಲ್ಲಿ ಬಂದು ನಿಂತದ್ದೇ ತಡ, ಒಬ್ಬ ಟ್ಯಾಕ್ಸಿಯವ ಕೈಎತ್ತುವ ಮೊದಲೇ ಕಾರು ನಿಲ್ಲಿಸಿದ್ದ. ''ಇಂಡಸ್ಟ್ರಿಯಲ್ ಏರಿಯಾ ಹದಿಮೂರಕ್ಕೆ'' ಎಂದೆ ನಾನು. ''ಹದಿಮೂರರಲ್ಲಿ ಎಲ್ಲಿ?'' ಎಂದ ಆತ. ''ವಿಳಾಸ ಇದೆ, ಬೇಕಿದ್ದರೆ ಮೊಬೈಲಿನಲ್ಲಿ ಜಿಪಿಎಸ್ ಹಾಕಿಕೊಳ್ಳೋಣ'' ಎಂದೆ ನಾನು. ''ನಮಗೆ ಟ್ಯಾಕ್ಸಿಯವರಿಗೆ ಜಿಪಿಎಸ್ಸಾ? ಸೂರ್ಯನಿಗೇ ಟಾರ್ಚ್ ಲೈಟಾ? ಇಲ್ಲಿಗೆ ಹೊಸಬನಾ?'' ನಕ್ಕು ಕೇಳಿದ ಆತ. ನಾನೂ ನಕ್ಕು ಹೌದೆಂದು ತಲೆಯಾಡಿಸಿದೆ. ''ನನಗೊಮ್ಮೆ ವಿಳಾಸ ಓದಿ ಹೇಳು. ಮತ್ತೆ ನಿನ್ನ ಧೈರ್ಯಕ್ಕೆ ಬೇಕಾದ್ರೆ ಜಿಪಿಎಸ್ ಹಾಕಿಕೋ'' ಎಂದ.

ಎದುರಿನ ಸೀಟಿನಲ್ಲಿ ಕುಳಿತು ಶಿಸ್ತಿನ ಸಿಪಾಯಿಯಂತೆ ಸೀಟ್ ಬೆಲ್ಟ್ ಹಾಕಿಕೊಂಡೆ. ನನಗೆ ಹೋಗಬೇಕಾದ ವಿಳಾಸ ಓದಿ ಹೇಳಿದೆ. ಸುಮ್ಮನೆ ತಲೆಯಲ್ಲಾಡಿಸಿದ.

''ಹಿಂದೂಸ್ತಾನಿಯಾ?'' ಎಂದ. ''ಹೌದು'' ಎಂದೆ ನಾನು. ''ಶಿಸ್ತಿನಲ್ಲಿ ಸೀಟ್ ಬೆಲ್ಟ್ ಹಾಕಿಕೊಂಡಾಗಲೇ ಗೊತ್ತಾಯಿತು. ನಮ್ಮ ಪಾಕಿಸ್ತಾನದವರಾದರೆ ಅವರ ಕಾಲು ಹಿಡೀಬೇಕು''

